ಬಂಧಿಸಿ ಕರೆತರುತ್ತಾನೆ." ಕರಮಚಂದನ ತಣ್ಣಗೆ ಹೇಳಿದ..

"ಕರಮಚಂದ್, ನಿನ್ಗೆ ಸ್ಯಾಮುಯೆಲ್ ಅಲ್ದೆ ಇನ್ಯಾರೋ ಇದರ ಹಿಂದೆ ಇದ್ದಾರೆ ಅನ್ನೋದು ಹೇಗೆ ಗೊತ್ತಾಯ್ತು?" ನಾನು ಕೇಳಿದೆ.

"ಓಹ್, ಸಣ್ಣ ತನಿಖೆಯಿಂದ ಗೊತ್ತಾಯ್ತು. ಕಾವೇರಿ ಎಂಪೋರಿಯಂನ ತಿಮ್ಮಯ್ಯ ನಮ್ ಪ್ರಶ್ನೆಗೆ ಸರಿ ಉತ್ತರ ನೀಡದಿದ್ದಾಗಲೇ ಅವ್ನ ಮೇಲೆ ಅನುಮಾನ ಬಂದಿತ್ತು. ಅವನ ಚರವಾಣಿಯ ಸಿಡಿಆರ್, ಕರೆ ವಿವರ ನೋಡಿದಾಗ, ನಾವು ಅಲ್ಲಿಂದ ಹೊರಬಿದ್ದ ತಕ್ಷಣ ಅವ್ನು ಒಂದು ಮೊಬೈಲಿಗೆ ಫೋನು ಮಾಡಿದ್ದ. ಅದು ಟೆಡ್ಡಿ ಅನ್ನೋನಿಗೆ ಸೇರಿದ್ದು. ಆ ಫೋನು ಹೆಚ್ಚಾಗಿ ಜೋಡು ಭಗವತಿ ದೇವಳದ ಸನಿಹದ ಟವರ್ ವ್ಯಾಪ್ತಿಯಲ್ಲೇ ಇರುತ್ತೆ. ಅಲ್ಲೇ ಕ್ರಾಸ್ ಲ್ಯಾಂಡ್ ಎಸ್ಟೇಟ್ ಇರೋದು. ಹಾಗಾಗಿ ಇನ್ನೊಬ್ಬನಿದ್ದಾನೆ ಅಂದುಕೊಂಡೆ."

"ಆದ್ರೆ ಒಂದು ಅನುಮಾನ. ನಾಚಿಯಪ್ಪನ್ ಮಂದಿಗೆ ಹೂದಾನಿಯಲ್ಲಿ ಅಡಗಿಸಿಟ್ಟಿರೋ ವಿಚಾರ ಹೇಗೆ ಗೊತ್ತಾಯಿತು?" ಕನ್ನಿವೆಂಕಟೇಶನ ನುಡಿ.

"ಪ್ರಾಯಶಃ ನಾಚಿಯಪ್ಪನ್ ಮಂದಿ ಚಿದಾನಂದನ ಕೊನೆಯ ಕರೆಯ ಆಧಾರದಲ್ಲಿ ನಿನ್ನ ಹಿಂದೆ ಬಿದ್ದಿರಬೇಕು, ವೆಂಕಟೇಶ್. ನೀನು ಚಾರ್ಲಿಯ ಹತ್ರ ಹೋಗಿದ್ದು, ನಂತ್ರ ಕಾವೇರಿ ಎಂಪೋರಿಯಂಗೆ ಹೋಗಿದ್ದು ಎಲ್ಲಾ ಗಮನಿಸಿದ್ದಾರೆ. ನೀನು ಹೂದಾನಿಯ ಬಗ್ಗೆ ಕೇಳಿದ್ದನ್ನು ತಿಮ್ಮಯ್ಯ ಅವ್ರಿಗೆ ಹೇಳಿದ್ದಾನೆ. ತಿಮ್ಮಯ್ಯ ನಿನ್ಗೆ ಮಾಹಿತಿ ಕೊಡ್ಬೇಕಾದ್ರೆ ಎಷ್ಟು ಹಣ ಕೊಟ್ಟೆ, ವೆಂಕಟೇಶ?" ಕರಮಚಂದ ಪ್ರಶ್ನೆ ಹಾಕಿದ.

"ಅವ್ನಿಗೆ ಹತ್ತು ಸಾವಿರ ಕೊಟ್ಟೆ. ಬಹುಶಃ ನಾಚಿಯಪ್ಪನ್ ಜನ ಹೆಚ್ಚು ಕೊಟ್ಟಿರಬೇಕು ಅಥವಾ ಧಮಕಿ ಹಾಕಿರಲೂಬಹುದು! ನಾನು ಹೂದಾನಿ ಕೇಳಿದ್ದನ್ನು ಅವರಿಗೆ ಹೇಳ್ದ, ಶುದ್ಧ ಪಟಿಂಗ!" ಕನ್ನಿವೆಂಕಟೇಶ ಶಪಿಸಿದ.

"ವೆಂಕಟೇಶ್, ತಂಗರಾಜು ಮನೆಯಲ್ಲಿ ಕಳ್ಳನಂತೆ ಯಾಕೆ ಇಣುಕಿ ನೋಡ್ದೆ? ಚಾರ್ಲಿಯ ವಸ್ತುಗಳ ಜೊತೆಗೆ ಕಂಚಿನ ವಿಗ್ರಹ ಯಾಕೆ ಬೇಕೆಂದು ಹೇಳ್ದೆ, ದರ ಯಾಕ್ ಹೇಳಲಿಲ್ಲ?" ನಾನು ಕೇಳಿದೆ.

"ನನ್ಗೆ ಬೇಕಿದ್ದುದು ಹೂದಾನಿಯಲ್ಲ. ಅದರ ತಳದಲ್ಲಿರೋ ಕಾರ್ಡ್ ಅಲ್ವೆ! ಅವಕಾಶವಿದ್ದರೆ ಅದನ್ನ ಎಗರಿಸುವ ಅಂತ ಅಲ್ಲಿಗೆ ಬಂದೆ. ಆದ್ರೆ ಆಗಲಿಲ್ಲ! ಕಂಚಿನ ವಿಗ್ರಹದ ಮೌಲ್ಯ ನನ್ಗೆ ಗೊತ್ತಿರಲಿಲ್ಲ. ಅದ್ಕೆ ರೇಟು ಹೇಳಲಿಲ್ಲ. ಕಾವೇರಿಯಲ್ಲಿ ಕೊಂಡದ್ದು ಮಾತ್ರ ಕೇಳಿದರೆ, ಸುಮ್ನೆ ಅನುಮಾನ ಬರಬಹುದು ಅಂತ ಕಂಚಿನ ವಿಗ್ರಹ ಸೇರಿಸಿದೆ, ಅಷ್ಟೇ."

ಅಷ್ಟರಲ್ಲಿ ಕರೆಗಂಟೆ ಸದ್ದಾಯಿತು. ನಾನು ಕದ ತೆರೆದೆ. ವೆಲಂಟೈನ್ ಡಿಸೋಜ ತನ್ನೆರಡು ಪೇದೆಗಳೊಂದಿಗೆ ಕಂಡ. ಅವನ ಜೊತೆಯಲ್ಲಿ ಇಬ್ಬರಿದ್ದರು. ಅವರಲ್ಲೊಬ್ಬ ನಾಚಿಯಪ್ಪನ್... ಅವನನ್ನು ನಾನು ಮೊದಲು ಕಂಡಿದ್ದೆ. ಇನ್ನೊಬ್ಬನು ಚಿದಾನಂದ ಅಂತ ಊಹಿಸಿದೆ. ಚಿದಾನಂದನನ್ನು ಕಂಡ ವೆಂಕಟೇಶನ ಮೊಗ ಅರಳಿತು. ನಮ್ಮನ್ನೆಲ್ಲಾ ಕಂಡ ನಾಚಿಯಪ್ಪನ್ ಕ್ರೋಧದಲ್ಲಿ ಗುಡುಗಿದ,

"ಓಹೋ, ಕರಮಚಂದ್! ಪತ್ತೇದಾರಿ ವಕೀಲ!! ನೀನೇ ತಾನೇ ಪೊಲೀಸರಿಗೆ ಹೇಳಿ ಕೊಟ್ಟೋನು. ನಿನ್ನನ್ನ ಒಂದು ಕೈ ನೋಡ್ಕೋತೀನಿ."

"ಏಯ್, ಸುಮ್ನಿರು! ಅಧಿಕ ಪ್ರಸಂಗ ಮಾತಾಡಿದ್ರೆ, ನಮ್ಮ ಮೆಥಡ್ ಗೊತ್ತಲ್ಲ..." ವೆಲಂಟೈನ್ ಗದರಿದ.